27.UTTARKANNADA	1)ANKOLA	1	-	3	-	4	-
	2)BHATKAL	1	2	5	-	6	2
	3)HALIYAL	1	1	4	-	5	1
	4)HONNAVAR	1	-	3	-	4	-
	5)KARWAR	1	-	2	-	3	-
	6)KUMTA	1	-	3	-	4	-
	7)MUNDAGOD	1	1	5	-	6	1
	8)SIDDAPUR	1	-	2	-	3	-
	9)SIRSI	2	1	7	-	9	1
	10)SOOPA	-	-	1	-	1	-
	11)YELLAPURA	-	-	1	-	1	-
	TOTAL	10	5	36	-	46	5
GRAND TOTAL		946	550	2,000	153	2,946	703

448(924) ಶ್ರೀ ನಿಂಗಪ್ಪ ಹೆಚ್(ಕುಣಿಗಲ್) ಮಾನ್ಯ ಪಶುಸಂಗೋಪನೆ ಮತ್ತು ವಕ್ಫ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಕುಣಿಗಲ್ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿರುವ 29 ಮಸೀದಿಗಳ ಪೈಕಿ ಬಹುತೇಕ ಮಸೀದಿಗಳು ಶಥಿಲವಾಗಿದ್ದು, ಅವುಗಳನ್ನು ದುರಸ್ಥಿ ಮಾಡಿಸುಲು ಸರ್ಕಾರ ಕ್ರಮ ಕೈಗೊಂಡಿದೆಯೇ?

ಆ) ಹಾಗಿದ್ದಲ್ಲಿ, ಶಿಥಿಲವಾಗಿರುವ ಮಸೀದಿಗಳನ್ನು ಎಷ್ಟು ಸಮಯದಲ್ಲಿ ಅಭಿವೃದ್ಧಿ ಪಡಿಸಲಾಗುವುದು?

ಶ್ರೀ ಮಿರಾಜುದ್ದೀನ್ ಎನ್. ಪಟೀಲ್ (ಪಶುಸಂಗೋಪನೆ ಮತ್ತು ವಕ್ಫ ಸಚಿವರು):

ಅ) ಈ ಬಗ್ಗೆ ನಿರ್ಧಷ್ಟ ಹಾಗೂ ಅಗತ್ಯ ದಾಖಿಲಾತಿಗಳೊಂದಿಗೆ ಪ್ರಸ್ತಾವನೆಗಳು ಬಂದಾಗ, ಅವುಗಳನ್ನು ಹಣದ ಲಭ್ಯತೆಯ ಆಧಾರದ ಮೇರೆಗೆ ಪರಿಗಣಿಸಲಾಗುವುದು.

ಆ) ಮೇಲೆ ನೀಡಿರುವ ಉತ್ತರದ ಹಿನ್ನೆಲೆಯಲ್ಲಿ ಈ ಪ್ರಶ್ನೆ ಉದ್ಭವಿಸುವುದಿಲ್ಲ.

449(298)ಶ್ರೀ ಓಲೇಕಾರ್ ನೆಹರು ಚನ್ನಬಸಪ್ಪ(ಬ್ಯಾಡಗಿ) ಮಾನ್ಯ ಪ್ರಾಥಮಿಕ ಮತ್ತು ಪ್ರೌಡ ಶಿಕ್ಷಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ನಡಸುತ್ತಿರುವ ವಿವಿಧ ಶಿಕ್ಷಣ ಸಂಸ್ಥೆಗಳು ಯಾವುವು(ಜಿಲ್ಲಾವಾರು ಮಾಹಿತಿ ಒದಗಿಸುವುದು);

ಆ) ಈ ಸಂಸ್ಥೆಗಳಿಗೆ ಕಟ್ಟಡ ಕಟ್ಟಲು ಹಾಗೂ ಮೂಲಭೂತ ಸೌಲಭ್ಯಗಳನ್ನು ಒದಗಿಸುವ ವಿಚಾರ ಸರಕಾರದ ಗಮನದಲ್ಲಿದೆಯೇ (ವಿವರಗಳನ್ನು ನೀಡುವುದು)

ಶ್ರೀ ಆರ್. ರಾಮಲಿಂಗ ರೆಡ್ಡಿ(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರು ನಡೆಸುತ್ತಿರುವ ಖಾಸಗಿ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಶಾಲೆಗಳ/ಪದವಿ ಪೂರ್ವ ಶಿಕ್ಷಣ ಸಂಸ್ಥೆಗಳ ಜಿಲ್ಲಾವಾರು ಮಾಹಿತಿಯನ್ನು ಲಗುತ್ತಿಸಲಾಗಿದೆ.

ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರು ನಡೆಸುತ್ತಿರುವ ಪದವಿ ಕಾಲೇಜುಗಳ ವಿವರ ಕೆಳಕಂಡಂತಿವೆ.

ಬೆಂಗಳೂರು ನಗರ ಜಿಲ್ಲೆ:

1) ಡಾ. ಬಿ.ಆರ್. ಅಂಬೇಡ್ಕರ್ ಪ್ರಥಮ ದರ್ಜೆ ಕಾಲೇಜು, ಇಂದಿರಾನಗರ, ಬೆಂಗಳೂರು–79.

2) ಶ್ರೀ ಭಗವಾನ್ ಬುದ್ಧ ಪ್ರಥಮ ದರ್ಜೆ ಕಾಲೇಜು, ಅನುಭವನಗರ, ಬೆಂಗಳೂರು–72.

ತುಮಕೂರು ಜಿಲ್ಲೆ:

3) ಶ್ರೀ ಸಿದ್ಧಾರ್ಥ ಪ್ರಥಮ ದರ್ಜೆ ಕಾಲೇಜು ಮರಳೂರು, ತುಮಕೂರು.

ಮೈಸೂರು ಜಿಲ್ಲೆ:

4) ಶ್ರೀ ಚನ್ನಕೇಶವ ಪ್ರಥಮ ದರ್ಜೆ ಕಾಲೇಜು, ಸಾಲಿಗ್ರಾಮ.

ಚಿತ್ರದುರ್ಗ ಜಿಲ್ಲೆ:

5) ಮಹಾರಾಜ ಮದಕರಿನಾಯಕ ಪ್ರಥಮ ದರ್ಜೆ ಕಾಲೇಜು, ಚಿತ್ರದುರ್ಗ–577501.

ದಾವಣಗೆರೆ:

6) ಹೋ.ಚಿ. ಬೋರಯ್ಯ ಸ್ಮಾರಕ ಪ್ರಥಮ ದರ್ಜೆ ಕಾಲೇಜು, ಜಗಳೂರು–577528.

ಗುಲ್ಬರ್ಗಾ ಜಿಲ್ಲೆ:

7) ಡಾ.ಬಿ.ಆರ್.ಅಂಬೇಡ್ಕರ್ ಕಾಲೇಜು, ಗುಲ್ಬರ್ಗಾ.

8) ಸಿದ್ಧಾರ್ಥ ಕಾನೂನು ಕಾಲೇಜು, ಗುಲ್ಬರ್ಗಾ.

ಬೀದರ್ ಜಿಲ್ಲೆ:

9) ಡಾ.ಬಿ.ಆರ್.ಅಂಬೇಡ್ಕರ್ ಕಾಲೇಜು, ಹಳ್ಳಿಖೇಡ.

ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರು ನಡೆಸುತ್ತಿರುವ ಇಂಜಿನಿಯರಿಂಗ್ ಕಾಲೇಜುಗಳ ವಿವರ ಕೆಳಕಂಡಂತಿವೆ.

ಪರಿಶಿಷ್ಟ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರು ನಡೆಸುತ್ತಿರುವ ಇಂಜಿನಿಯರಿಂಗ್ ಕಾಲೇಜುಗಳು–2.

1) ಅಂಬೇಡ್ಕರ್ ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿ, ಬೆಂಗಳೂರು, ಬೆಂಗಳೂರು ಜಿಲ್ಲೆ.

2) ಸಿದ್ಧಾರ್ಥ ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿ, ತುಮಕೂರು, ತುಮಕೂರು ಜಿಲ್ಲೆ.

ಆ) ಸದರಿ ಶಿಕ್ಷಣ ಸಂಸ್ಥೆಗಳ ಆಡಳಿತ ಮಂಡಳಿಗಳೇ ಇವುಗಳನ್ನು ಒದಗಿಸಬೇಕಾಗಿದ್ದು, ಇದ್ದಕ್ಕೆ ಸರ್ಕಾರದ ಪರಿಶೀಲನೆಯಲ್ಲಿಲ್ಲ.

450(968) ಶ್ರೀ ಓಲೇಕಾರ್ ನೆಹರು ಚನ್ನಬಸಪ್ಪ(ಬ್ಯಾಡಗಿ) ಮಾನ್ಯ ಸಮಾಜ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಕ್ಲಾಸ್ 1 ಹುದ್ದೆಗಳಿಂದ ಕ್ಲಾಸ್ 4 ಬ್ಯಾಕ್‌ಲಾಗ್ ಹುದ್ದೆಗಳವರೆಗಿನ ವಿವರಗಳನ್ನು ಸಂಗ್ರಹಿಸಲಾಗಿದೆಯೇ(ಇಲಾಖಾವಾರು, ಹುದ್ದೆವಾರು ವಿವರಗಳನ್ನು ನೀಡುವುದು)

ಆ) ಕಳೆದ ಮೂರು ವರ್ಷಗಳ ಅವದಿಯಲ್ಲಿ ವಿವಿದ ಇಲಾಖೆಗಳಲ್ಲಿ ತುಂಬಲಾದ ಹುದ್ದೆಗಳು ಯಾವುವು (ಕೇಡರ್ ವಾರು ವಿವರ ನೀಡುವುದು)

ಇ) ಬಾಕಿ ಉಳಿದಿರುವ ಬ್ಯಾಕ್‌ಲಾಗ್ ಹುದ್ದೆಗಳನ್ನು ತುಂಬಲು ಕಾಲ ನಿಗದಿಪಡಿಸಲಾಗಿದೆಯೇ:

ಈ) ಹೌದಾದಲ್ಲಿ ಕಾಲಮಿತಿ ಒಳಗೆ ಹುದ್ದೆಗಳನ್ನು ತುಂಬದಿರುವವರ ವಿರುದ್ದ ಕೈಗೊಳ್ಳುವ ಕ್ರಮಗಳೇನು?

ಡಾ॥ ವೈ. ನಾಗಪ್ಪ(ಸಮಾಜ ಕಲ್ಯಾಣ ಸಚಿವರು) :

ಅ) ರಾಜ್ಯದ ಎಲ್ಲಾ ಇಲಾಖೆ/ನಿಗಮ/ಮಂಡಳಿ/ವಿಶ್ವವಿದ್ಯಾಲಯ/ಸಹಕಾರಿ ಸಂಸ್ಥೆಗಳಲ್ಲಿ ಎಲ್ಲಾ ವೃಂದದ ಬ್ಯಾಕ್‌ಲಾಗ್ ಹುದ್ದೆಗಳನ್ನು ಸಂಗ್ರಹಿಸಲಾಗಿದೆ(ಇಲಾಖಾವಾರು ಮಾಹಿತಿ ಲಗತ್ತಿಸಿದೆ).

ಆ) ಸರ್ಕಾರವು ಅಧಿಸೂಚನೆ ಹೂರಡಿಸಿದ ದಿನಾಂಕ:

21-11-01 ರಿಂದ ದಿ:29-12-2004ರವರೆಗೆ ಒಟ್ಟು 13184 ಬ್ಯಾಕ್‌ಲಾಗ್ ಹುದ್ದೆಗಳಿಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗಿದೆ,(ಕೇಡರ್‌ವಾರು ವಿವರ ಲಭ್ಯವುರುವುದಿಲ್ಲ)

ಇ) ಬ್ಯಾಕ್‌ಲಾಗ್ ಹುದ್ದೆ ಗುರುತಿಸುವಿಕೆ, ತುಂಬುವಿಕೆಯು ಒಂದು ನಿರಂತರ ಪ್ರಕ್ರಿಯೆಯಾಗಿದ್ದು, ಕಾಲಮಿತಿ ನಿಗಧಿಪಡಿಸಲು ಸಾಧ್ಯವಾಗುವುದಿಲ್ಲ, ಆದಷ್ಟು ಶೀಘ್ರದಲ್ಲಿ ಪೂರ್ಣಗೊಳಿಸಲು ಕ್ರಮಳ ತೆಗೆದುಕೊಳಲಾಗುವುದು.

ಈ) ಈಗಾಗಲೇ ಎಲ್ಲಾ ಇಲಾಖೆಗಳು ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ತೆಗೆದುಕೂಂಡಿರುತ್ತಾರೆ.

451(652) ಶ್ರೀ ಬಿ.ಸಿ.ಪಾಟೀಲ್(ಹಿರೇಕೆರೂರು) ಮಾನ್ಯ ಸಮಾಜ ಕಲ್ಯಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಹಿರೇಕೆರೂರು ತಾಲ್ಲೂಕಿನಲ್ಲಿ ಮೊರಾರ್ಜಿ ದೇಸಾಯಿ ವಸತಿ ಶಾಲೆಯನ್ನು ಸ್ಥಾಪಿಸಲು ಪ್ರಸ್ತಾವನೆ ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದಲ್ಲಿ, ಈ ಬಗ್ಗೆ ಸರ್ಕಾರ ತೆಗೆದುಕೂಂಡಿರುವ ಕ್ರಮವೇನು?

ಇ) ತಾಲ್ಲೂಕಿನಲ್ಲಿ ಹೂಸದಾಗಿ 4 ಬಿ.ಸಿ.ಎಂ ವಸತಿ ನಿಲಯಗಳನ್ನು ಸ್ಥಾಪಿಸಲು ಪ್ರಸ್ತಾವನೆ ನಿಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಾದರೆ, ಈ ಬಗ್ಗೆ ಸರ್ಕಾರ ತೆಗೆದುಕೂಂಡಿರುವ ಕ್ರಮವೇನು?

ಶ್ರೀ ವೈ. ನಾಗಪ್ಪ (ಸಮಾಜ ಕಲ್ಯಾಣ ಸಚಿವರು) :

ಅ) ಹೌದು.

ಆ) ಪರಿಶೀಲನೆಯಲ್ಲಿರುತ್ತದೆ.